# ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ-1095/2021/ಎ.ಆರ್.ಎಲ್.ಒ-1 ದಿನಾಂಕ:11-10-2021

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ:- ಎದುರುದಾರರಾದ ಶ್ರೀ ಹೆಚ್. ಎಂ. ಕಾಂತರಾಜು, ಪೊಲೀಸ್ ಇನ್ಸ್‌ಪೆಕ್ಟರ್, ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆ, ಬೆಂಗಳೂರು ರವರು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀಮತಿ ವೀಣಾ ಎನ್. D/o ನಾರಾಯಣ, ನಂ: 26, 19ನೇ ಮುಖ್ಯ ರಸ್ತೆ, ಜೆ.ಸಿ.ನಗರ, ಮಹಾಲಕ್ಷ್ಮಿಪುರಂ, ಬೆಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ ಹೆಚ್.ಎಂ.ಕಾಂತರಾಜು, ಪೊಲೀಸ್ ಇನ್ಸ್‌ಪೆಕ್ಟರ್, ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆ, ಬೆಂಗಳೂರು (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ಸಾರಾಂಶ:-**

ದೂರುದಾರರು ಮಹಾಲಕ್ಷ್ಮಿಲೇಔಟ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರವರಾದ ಶ್ರೀ ಕಾಂತರಾಜು (ಎದುರುದಾರರು) ರವರ ವಿರುದ್ಧ ಮಾಡಿರುವ ಆಪಾದನೆಯ ಸಂಕ್ಷಿಪ್ತ ಸಾರಾಂಶವೇನೆಂದರೆ, ತಮ್ಮ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು ಸುದ್ದಿಯನ್ನು ಹಬ್ಬಿಸಿದ ವಿಚಾರದಲ್ಲಿ ದೂರು ಕೊಡಲು ಮಹಾಲಕ್ಷ್ಮಿಲೇಔಟ್ ಪೊಲೀಸ್ ಠಾಣೆಗೆ ಹಿತೈಷಿಗಳೊಂದಿಗೆ ಹೋಗಿ ಶ್ರೀ ಕಾಂತರಾಜುರವರನ್ನು ಭೇಟಿ ಮಾಡಿ ದೂರು ನೀಡಿದಾಗ ಅವರು ದೂರನ್ನು ನೋಡಿ "ಸ್ವಲ್ಪ ಬದಲಾಯಿಸಿದರೆ ನಿಮ್ಮ ಸಮಸ್ಯೆ ಬಗೆಹರಿಸಲು ಸುಲಭವಾಗುತ್ತದೆ" ಎಂದು ಹೇಳಿ ಒತ್ತಾಯಿಸಿದ್ದರಿಂದ ತಮಗ ತಮ್ಮ

ದೂರಿಗೆ ಪರಿಹಾರ ಮುಖ್ಯವಾದುದ್ದರಿಂದ ಇನ್ಸ್‌ಪೆಕ್ಟರ್ ಹೇಳಿದಂತೆ ಬದಲಾಯಿಸಿ ದೂರನ್ನು ಹಾಗೂ ತಾವು ವಾಸ್ತವವಾಗಿ ಬರೆದಿದ್ದ ದೂರಿನ ಪ್ರತಿಯನ್ನು ಇನ್ಸ್‌ಪೆಕ್ಟರವರಿಗೆ ನೀಡಿರುವುದಾಗಿ ಹೇಳಿರುತ್ತಾರೆ.

3. ಆ ಸಮಯದಲ್ಲಿ ಕೋವಿಡ್-19 ಕರ್ತವ್ಯದಿಂದ ಬಿಜಿ ಆಗಿದ್ದರಿಂದ ಮರುದಿನ ಎಫ್.ಐ.ಆರ್. ಮಾಡಿಕೊಡುತ್ತೇನೆಂದು ಹೇಳಿ ತಮ್ಮನ್ನು ಕಳುಹಿಸಿದರು ಎಂದು ಹೇಳಿರುತ್ತಾರೆ. ಆ ಬಗ್ಗೆ ಇನ್ಸ್‌ಪೆಕ್ಟರವರಿಂದ ದಿನಾಂಕ:29-04-2021 ರಂದು ರಾತ್ರಿ ಅರ್ಜಿ ಸ್ವೀಕರಿಸಿರುವಂತೆ ತಿಳಿದಿರುವುದಾಗಿ ಈ ಬಗ್ಗೆ ಶ್ರೀ ಕಾಂತರಾಜುರವರನ್ನು ವಿಚಾರಿಸಿದಾಗ ಡಿ.ಸಿ.ಪಿ. ರವರು ಎಫ್.ಐ.ಆರ್. ಮಾಡಬಾರದೆಂದು ತಿಳಿಸಿದರು ಎಂದು ಹೇಳಿರುತ್ತಾರೆ. ಆದರೆ ಇಲ್ಲಿಯವರೆವಿಗೂ ಎದುರುದಾರರು ಕೇಸು ರಿಜಿಸ್ಟರ್ ಮಾಡಿ ಯಾವುದೇ ಕ್ರಮ ಕೈಗೊಳ್ಳದೇ ದೂರುದಾರರ ದಿನಾಂಕ: 27-04-2021ರ ಅರ್ಜಿಗೆ ದಿನಾಂಕ: 29-04-2021 ರಂದು ಪೊಲೀಸ್ ಐ.ಟಿ. ಮೂಲಕ ಅರ್ಜಿ ವಿಚಾರಣೆಗೆ ಪಡೆದಂತೆ ಹಾಗೂ ಸದರಿ ದೂರಿಗೆ ಸಂಬಂಧಪಟ್ಟಂತೆ ಮುಂದೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಹಿಂಬರಹವನ್ನು ನೀಡಿದ್ದಾರೆಂದು ಹೇಳಿರುತ್ತಾರೆ.

4. ಡಿ.ಸಿ.ಪಿ., ಉತ್ತರ ರವರಿಂದ ಸೂಚನೆ ಇದ್ದರೂ ಸಹ ಎದುರುದಾರರು ದೂರುದಾರರ ದೂರು ದಾಖಲಿಸದೇ ದುರುದ್ದೇಶದಿಂದ ದೂರನ್ನು ಬದಲಾಯಿಸಿಕೊಂಡು ಅದರ ಬಗ್ಗೆ ಡಿ.ಸಿ.ಪಿ. ರವರ ಮುಂದೆ ಆರೋಪ ಮಾಡಿರುವುದರಿಂದ ಅವರು ನೀಡಿದ ಹಿಂಬರಹವನ್ನು ಪಡೆಯಲು ತಿರಸ್ಕರಿಸಿರುವುದಾಗಿ ಹಾಗೂ ಡಿ.ಸಿ.ಪಿ. ರವರ ಕಛೇರಿಯಿಂದ ಪಡೆದಿದ್ದ ದೂರಿಗೆ ಮುಂದೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿರುವ ಮಾಹಿತಿಯ ಹಿಂಬರಹವನ್ನು ಸ್ವೀಕರಿಸಿರುವುದಾಗಿ ಹೇಳಿರುತ್ತಾರೆ.

5. ದೂರುದಾರರು ಮೊದಲು ತಿರಸ್ಕರಿಸಿದ ಹಿಂಬರಹವನ್ನು ಎದುರುದಾರರು ದಿನಾಂಕ:08-05-2021 ರಂದು ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿದ ಮಾಹಿತಿಯ ಹಿಂಬರಹವನ್ನು ಸ್ವೀಕರಿಸಿಕೊಂಡಿರುವುದಾಗಿ ಹೇಳಿರುತ್ತಾರೆ. ದೂರುದಾರರು ನೀಡಿರುವ

ದೂರುಗಳ ಬಗ್ಗೆ ಮಹಾಲಕ್ಷ್ಮಿಲೇಔಟ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಹಾಗೂ ಡಿ.ಸಿ.ಪಿ. ಉತ್ತರ ವಲಯ, ಬೆಂಗಳೂರು ರವರು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆಪಾದಿಸಿ ಇಲ್ಲಿಯವರೆವಿಗೂ ದೂರು ದಾಖಲಿಸದೇ ಇರುವ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಾಗೂ ಡಿ.ಸಿ.ಪಿ. ರವರ ವಿರುದ್ಧ ಕರ್ತವ್ಯಲೋಪದ ಬಗ್ಗೆ ಕ್ರಮ ಜರುಗಿಸುವಂತೆ ಹೇಳಿರುತ್ತಾರೆ.

6. ಸದರಿ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಕರೆಯಲಾಗಿರುತ್ತದೆ. ಎದುರುದಾರರು ದಿನಾಂಕ:12-07-2021 ರಂದು ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

7. ಸದರಿ ಆಕ್ಷೇಪಣೆಯಲ್ಲಿ ದಿನಾಂಕ:28-04-2021 ರಂದು ಶ್ರೀಮತಿ ವೀಣಾ ರವರು ಶ್ರೀಶಿವನಂದಮೂರ್ತಿ ಮತ್ತು ನಿವೃತ್ತ ಎಸ್.ಪಿ. ಶ್ರೀ ಓಂಕಾರಯ್ಯರವರೊಂದಿಗೆ ಠಾಣೆಗೆ ಹಾಜರಾಗಿ ಶ್ರೀ ಓಂಕಾರಯ್ಯ ರವರು ದೂರು ನೀಡುವುದು ಇದೆ ಎಂದು ತಿಳಿಸಿ ತಮ್ಮ ಮೊಬೈಲ್ ನಂ:9606014545 ರಿಂದ ಮೊಬೈಲ್ ನಂ9900527576 ಕ್ಕೆ ರಾತ್ರಿ ಸುಮಾರು 7.20 ಗಂಟೆಗೆ ಒಂದು ವ್ಯಾಟ್ಸ್ ಆಪ್ ನಲ್ಲಿ ಪಿ.ಡಿ.ಎಫ್. ಫೈಲ್‌ನ್ನು ಕಳುಹಿಸಿ ಪ್ರಿಂಟ್ ತೆಗೆಸಿಕೊಳ್ಳಿ ಎಂದು ಹೇಳಿದ್ದ ಮೇರೆಗೆ ಠಾಣೆಯ ಪ್ರಿಂಟರಿನಿಂದ ಪ್ರಿಂಟ್ ತೆಗೆಸಿಕೊಟ್ಟ ನಂತರ ಶ್ರೀ ಓಂಕಾರಯ್ಯ ರವರು ಸದರಿ ದೂರಿಗೆ ಶ್ರೀಮತಿ ವೀಣಾ ರವರಿಂದ ಸಹಿ ಮಾಡಿಸಿ ಕೇಸು ದಾಖಲಿಸುವಂತೆ ಕೇಳಿದರು ಎಂದು ಹೇಳಿದ್ದು, ತಾವು ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದೆಂದು ಹೇಳಿರುವುದಾಗಿ ಹೇಳಿರುತ್ತಾರೆ.

8. ದಿನಾಂಕ:29-04-2021 ರಂದು ಶ್ರೀಮತಿ ವೀಣಾ ರವರು ಮತ್ತೆ ಶ್ರೀಓಂಕರಯ್ಯ ರವರೊಂದಿಗೆ ಪೊಲೀಸ್ ಠಾಣೆಗೆ ಹಾಜರಾಗಿದ್ದು, ಆ ಸಮಯದಲ್ಲಿ ದೂರಿನಲ್ಲಿ ಆಪಾದಿತ ವ್ಯಕ್ತಿಗಳು ದೂರುದಾರರಿಗೆ ವ್ಯಕ್ತಿಗತ ತೇಜೋವಧೆ ಮಾಡಿರುವ ಆಪಾದನೆಗಳು ಕಂಡುಬಂದಿದ್ದರಿಂದ ಸದರಿ ಕೃತ್ಯವು ಮಾನಹಾನಿಯ ಅಪರಾಧವಾಗಿದ್ದು, ಆ ಕುರಿತಂತೆ ನೊಂದ ವ್ಯಕ್ತಿ ನೇರವಾಗಿ ನ್ಯಾಯಾಲಯಕ್ಕೆ ಹೋಗಿ ಖಾಸಗಿ ದೂರನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಕಲಂ 199 ಸಿ.ಆರ್.ಪಿ.ಸಿ. ಅಡಿಯಲ್ಲಿ ಅವಕಾಶ

ಇದುದ್ದರಿಂದ ಪೊಲೀಸರು ತನಿಖೆ ಮಾಡುವ ಅಧಿಕಾರ ಇರುವುದಿಲ್ಲ. ಆದ್ದರಿಂದ ದೂರನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿ ಹಿಂಬರಹ ನೀಡಿದ್ದು, ಸದರಿ ಹಿಂಬರಹವನ್ನು ಪಡೆಯಲು ದೂರುದಾರರು ನಿರಾಕರಿಸಿ ಹೋಗಿದ್ದರಿಂದ ಆ ಹಿಂಬರಹವನ್ನು ನಂತರ ಪೋಸ್ಟ್ ಮುಖಾಂತರ ಕಳುಹಿಸಲಾಗಿದೆ ಎಂದು ಹೇಳಿರುತ್ತಾರೆ.

9. ಮುಂದುವರೆದ ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ:30-04-2021 ರ ಮದ್ಯಾಹ್ನ ಶ್ರೀ ಓಂಕಾರಯ್ಯ ರವರು ಠಾಣೆಗೆ ಬಂದು ಶ್ರೀಮತಿ ವೀಣಾರವರ ಪರವಾಗಿ ಅರ್ಜಿಯನ್ನು ನೀಡಿ ಸದರಿ ಅರ್ಜಿಯಲ್ಲಿ ದಿನಾಂಕ:28-04-2021 ರಂದು ಶ್ರೀಮತಿ ವೀಣಾರವರು ನೀಡಿರುವ ದೂರಿನಲ್ಲಿರುವ ಎಲ್ಲಾ ಅಂಶಗಳು ಒಳಗೊಂಡ ಅದರ ಜೊತೆಗೆ ಹೆಚ್ಚುವರಿಯಾಗಿ ದಿನಾಂಕ: 27-04-2021 ರಂದು ಸಂಜೆ ಸುಮಾರು 5 ರಿಂದ 7 ಗಂಟೆಯಲ್ಲಿ ತಾವು ಮಹಾಲಕ್ಷ್ಮಿಲೇಔಟ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಬೋವಿಪಾಳ್ಯದ ತಮ್ಮ ಕಟ್ಟಡದಲ್ಲಿ ಶ್ರೀ ಓಂಕಾರಯ್ಯ ಮತ್ತು ಶ್ರೀಶಿವನಂದಮೂರ್ತಿ ರವರ ಜೊತೆ ಮಾತನಾಡುತ್ತಾ ಕುಳಿತ್ತಿದ್ದಾಗ ಸುಮಾರು 25-30 ವರ್ಷ ವಯಸ್ಸಿನ ಇಬ್ಬರು ಅಪರಿಚಿತ ಹುಡಗರು ಕಟ್ಟಡದೊಳಗೆ ಅತಿಕ್ರಮಣ ಪ್ರವೇಶ ಮಾಡಿ ಶ್ರೀಮತಿ ವೀಣಾ ಎಂದರೆ ಯಾರು ಎಂದು ಕೇಳಿ ನಂತರ ಆ ಹುಡುಗರು "ನೀವು ಶ್ರೀರಾಕೇಶ್ ಶೆಟ್ಟಿರವರ ವಿರುದ್ದ ಸೈಬರ್ ಕ್ರೈಂ ನಲ್ಲಿ ಕಂಪ್ಲೆಂಟ್ ಕೊಟ್ಟಿದ್ದಿರಿ ಇದರಿಂದ ಅವರಿಗೆ ಸಾಕಷ್ಟು ಅವಮಾನ ಆಗಿದೆ" ಎಂದು ಬೆದರಿಕೆ ಹಾಕುತ್ತಾ ಜೋರು ಧ್ವನಿಯಲ್ಲಿ ಮಾತನಾಡಿ ಅವರಲೊಬ್ಬ ಕಟ್ಟಡದಲ್ಲಿ ಸಿಮೆಂಟ್ ಇಟ್ಟಿಗೆ ತೋರಿಸಿ ಬೆದರಿಕೆ ಹಾಕಿರುವುದಾಗಿ ಹಾಗೂ ಶ್ರೀ ಓಂಕಾರಯ್ಯ ಮತ್ತು ಶ್ರೀಶಿವನಂದಮೂರ್ತಿ ರವರು ಪ್ರತಿರೋಧ ಮಾಡಿ ಕಳುಹಿಸಿದರು ಎಂದು ದೂರಿನಲ್ಲಿ ಹೇಳಿಕೊಂಡಿದ್ದರು ಎಂದು ಹೇಳಿರುತ್ತಾರೆ ಹಾಗೂ ಈ ಎಲ್ಲಾ ಅಂಶಗಳನ್ನು ಹೆಚ್ಚುವರಿಯಾಗಿ ಸೇರಿಸಿ ಈ ಬಗ್ಗೆ ಕಲಂ 120(ಬಿ), 448, 506, 499, 500, 509 ಸಹವಾಚಕ 34 ಐ.ಪಿ.ಸಿ. ಅಡಿಯಲ್ಲಿ ಕ್ರಮ ತೆಗೆದುಕೊಂಡು ಎಫ್.ಐ.ಆರ್ ಮಾಡುವಂತೆ ಶ್ರೀಮತಿ ವೀಣಾ ರವರ ಪರ ಶ್ರೀ ಓಂಕಾರಯ್ಯ ರವರು ಸೂಚಿಸಿರುವುದಾಗಿ ಹೇಳಿರುತ್ತಾರೆ. ಈ ಬಗ್ಗೆ ದಿನಾಂಕ:

28-04-2021 ರಂದು ನೀಡಿರುವ ಅರ್ಜಿಗೆ ಈ ರೀತಿ ಹೆಚ್ಚುವರಿಯಾಗಿ ಬೇರೆ ವಿಚಾರವನ್ನು ನಮೂದಿಸಿ ತಂದಿರುತ್ತೀರಿ ಇದು ಸರಿಯಾದ ಕ್ರಮವಲ್ಲವೆಂದು ತಿಳಿಸಿದಾಗ ಶ್ರೀ ಓಂಕಾರಯ್ಯ ರವರು "ನೀವು ಎಫ್.ಐ.ಆರ್. ಮಾಡಲಿಲ್ಲ ಎಂದರೆ ಏನ್ ಮಾಡಬೇಕೆಂದು ಗೊತ್ತಿದೆ" ಎಂದು ಏರು ಧ್ವನಿಯಲ್ಲಿ ಮಾತನಾಡಿ ಹೊರಟು ಹೋದರು ಎಂದು ಹೇಳಿರುತ್ತಾರೆ.

10. ಈ ದೂರಿನ ಸಂಬಂಧ ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದು, ಸಾಕ್ಷಿದಾರರಾದ ಶ್ರೀ ಅಂಬರೀಶ್ ಬಿನ್ ಮಂಚೇಗೌಡ ಹಾಗೂ ಶ್ರೀ ಹರಷತ್ ಬಿನ್ ಕುಮಾರಸ್ವಾಮಿ ರವರು ತಮ್ಮ ಹೇಳಿಕೆಯಲ್ಲಿ ದಿನಾಂಕ:27-04-2021 ರಂದು ಸಂಜೆ 6 ರಿಂದ 7 ಗಂಟೆ ನಡುವೆ ಯಾವುದೇ ಗಲಾಟೆ ಆಗಿಲ್ಲ ಗಲಾಟೆ ಶಬ್ದವು ತಮಗೆ ಕೇಳಿಸಿಲ್ಲವೆಂದು ಹಾಗೂ ಯಾರೂ ಓಡಾಡಿರುವುದನ್ನು ನೋಡಿರುವುದಿಲ್ಲವೆಂದು ಹೇಳಿಕೆ ನೀಡಿದ್ದಾರೆಂದು ಹೇಳಿರುತ್ತಾರೆ.

11. ಮುಂದುವರೆದು, ಸದರಿ ದೂರು ಅರ್ಜಿ ವಿಚಾರಣೆಯಲ್ಲಿರುವಾಗ ಅರ್ಜಿದಾರರಾದ ಶ್ರೀಮತಿ ವೀಣಾ ರವರು ದಿನಾಂಕ:30-04-2021 ರಂದು ಮಾನ್ಯ ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ ರವರ ಬಳಿ ಸಲ್ಲಿಸಿಕೊಂಡ ದೂರು ಅರ್ಜಿಯ ವಿಚಾರಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪಿ.ಸಿ.ಆರ್. ನಂ:9378/2021 ರಲ್ಲಿ ದೂರು ಸಲ್ಲಿಸಿಕೊಂಡಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:16-06-2021 ರಂದು ಸಿ.ಆರ್.ಪಿ.ಸಿ. ಕಲಂ 156(3) ರಡಿಯಲ್ಲಿ ತನಿಖೆ ನಡೆಸಿ, ವರದಿ ಸಲ್ಲಿಸಲು ಆದೇಶಿಸಿದ ಮೇರೆಗೆ ಮೊಕದ್ದಮೆ ಸಂಖ್ಯೆ:99/2021 ರಂತೆ ಕಲಂ 499, 500, 506, 509, 120(ಬಿ) ಐ.ಪಿ.ಸಿ. ಮತ್ತು indecent of presentation of women (Prohibition) Act, 1986 ರ ಕಲಂ 3 ಮತ್ತು 4 ರಂತೆ ತನಿಖೆ ಕೈಗೊಂಡಿರುತ್ತದೆ ಎಂದು ಹೇಳಿರುತ್ತಾರೆ ಹಾಗೂ ದೂರುದಾರರು ದಿನಾಂಕ:30-04-2021 ರಂದು ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ ಬಳಿ ಸಲ್ಲಿಸಿಕೊಂಡ ದೂರಿನ ಅಂಶಗಳು ಮತ್ತು ನ್ಯಾಯಾಲಯ ಪಿ.ಸಿ.ಆರ್.ಪ್ರಕರಣದಲ್ಲಿ

ಸಲ್ಲಿಸಿದ ದೂರಿನ ಅಂಶಗಳು ದೂರಿನಲ್ಲಿರುವುದರಿಂದ ದೂರು ಅರ್ಜಿಯನ್ನು ಪಿ.ಸಿ.ಆರ್.ಅಡಿಯಲ್ಲಿ ತನಿಖೆಗೆ ಒಳಪಡಿಸಿಕೊಳ್ಳಲಾಗಿದೆ ಎಂದು ಹಿಂಬರಹವನ್ನು ದಿನಾಂಕ:05-07-2021 ರಂದು ದೂರುದಾರರಿಗೆ ನೀಡಿರುವುದಾಗಿ ಹೇಳಿರುತ್ತಾರೆ.

12. ಮುಂದುವರೆದು, ಎರುದಾರರ ಆಕ್ಷೇಪಣೆ ಎಂದರೆ, ದಿನಾಂಕ:27-04-2021 ರಂದು ಘಟನೆ ನಡೆದ ನಂತರ ದಿನಾಂಕ:28-04-2021 ರಂದು ಮಹಾಲಕ್ಷ್ಮಿಲೇಔಟ್ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿದ ದೂರು ಅರ್ಜಿಯಲ್ಲಿ ಮತ್ತು ನ್ಯಾಯಾಲಯದ ಮುಂದೆ ಸಲ್ಲಿಸಿದ ಪಿ.ಸಿ.ಆರ್. ಪ್ರಕರಣದಲ್ಲಿ ಎಲ್ಲಿಯೂ ಸಹ ದಿನಾಂಕ:27-04-2021 ರಂದು ನಡೆದ ಘಟನೆಯ ಬಗ್ಗೆ ನಮೂದಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಆ ಘಟನೆಯ ಸಮಯದಲ್ಲಿ ಶ್ರೀ ಓಂಕಾರಯ್ಯ ಸ್ಥಳದಲ್ಲಿ ಇದಿದ್ದೆ ಆಗಿದ್ದರೆ ಫೋನ್ ಮೂಲಕ ಠಾಣೆಗೆ ಘಟನೆಯ ಬಗ್ಗೆ ತಿಳಿಸಬಹುದಾಗಿತ್ತು. ಹೀಗೆ ಮಾಡದಿರುವುದು ಅನುಮಾನ ಉಂಟು ಮಾಡುತ್ತದೆ ಎಂದು ಹಾಗೂ ತಾವು ಯಾವುದೇ ಕರ್ತವ್ಯ ನಿರ್ಲಕ್ಷ್ಯ ಮಾಡಿರುವುದಿಲ್ಲವೆಂದು ಹೇಳಿ ದೂರನ್ನು ಮುಕ್ತಾಯಗೊಳಿಸುವಂತೆ ಹೇಳಿ ಕೋರಿಕೊಂಡಿರುತ್ತಾರೆ.

13. ಎದುರುದಾರರ ಆಕ್ಷೇಪಣೆಗೆ ಪೂಕರವಾಗಿ ಎ.ಸಿ.ಪಿ. ಮಲ್ಲೇಶ್ವರಂ ಉಪವಿಭಾಗ ರವರು ದಿನಾಂಕ:15-07-2021 ರ ವರದಿಯನ್ನು ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ ರವರಿಗೆ ಸಲ್ಲಿಸಿದ್ದಾರೆ ಹಾಗೂ ಡಿ.ಸಿ.ಪಿ. ಉತ್ತರ ವಿಭಾಗ ರವರು ದಿನಾಂಕ:03-08-2021 ರ ವರದಿಯನ್ನು ಸಲ್ಲಿಸಿ ಶ್ರೀಮತಿ ವೀಣಾರವರು ದೂರಿನಲ್ಲಿ ನೀಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿದೆ. ಆದುದರಿಂದ ಅರ್ಜಿಯನ್ನು ಮುಕ್ತಾಯ ಮಾಡಲು ಮಲ್ಲೇಶ್ವರಂ ಉಪವಿಭಾಗದ ಎ.ಸಿ.ಪಿ. ರವರು ಸಲ್ಲಿಸಿರುವ ವರದಿಯನ್ನು ಅನುಮೋದಿಸಿರುತ್ತಾರೆ.

14. ಸದರಿ ವರದಿಗೆ ಸಂಬಂಧಪಟ್ಟಂತೆ ದೂರುದಾರರು ದಿನಾಂಕ:04-09-2021 ರಂದು ತಮ್ಮ ವಿವರವಾದ ಪ್ರತ್ಯುತ್ತರವನ್ನು ಸಲ್ಲಿಸಿದ್ದಾರೆ ಹಾಗೂ ಈ ಹಿಂದೆ ತಾವು ದಿನಾಂಕ:24-07-2021 ರಂದು ಈ ಪ್ರಾಧಿಕಾರದ ಮುಂದೆ ಸಲ್ಲಿಸಿದ ಪ್ರತ್ಯುತ್ತರದ

ವರದಿಯನ್ನು ಸಹ ಉಲ್ಲೇಖಿಸಿರುತ್ತಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಪೊಲೀಸ್ ಅಧಿಕಾರಿಗಳು ಸಲ್ಲಿಸಿರುವ ವರದಿಯು ಸತ್ಯಕ್ಕೆ ದೂರವಾಗಿದೆ ಎಂದು ಹೇಳಿರುತ್ತಾರೆ ಹಾಗೂ ದಿನಾಂಕ:27-04-2021 ರಿಂದ 16-06-2021 ರವರೆಗೆ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ (ಎದುರುದಾರರು) ರವರು ತಮ್ಮ ಸಂಜ್ಞೆಯ ದೂರನ್ನು ದಾಖಲು ಮಾಡದ ಕಾರಣ ಮಾನ್ಯ ನ್ಯಾಯಾಲಯದ ಮೂಲಕ ಖಾಸಗಿ ದೂರು ಸಲ್ಲಿಸಿದ್ದರ ಮೇರೆಗೆ ಮೊಕದ್ದಮೆ ಸಂಖ್ಯೆ:99/2021 ರಂತೆ ಪ್ರಕರಣ ದಾಖಲಾಗಿ ತನಿಖೆಯಲ್ಲಿರುವುದಾಗಿ ಹೇಳಿರುತ್ತಾರೆ ಹಾಗೂ ತಮ್ಮ ಮೊದಲಿನ ಸಮಸ್ಯೆ ಸಾಮಾಜಿಕ ಜಾಲತಾಣದಲ್ಲಿರುವ ವಿಡಿಯೋ ಕ್ಲಿಪಿಂಗ್‌ಗಳನ್ನು ಯೂಟ್ಯೂಬ್ ಚಾನಲ್‌ನಿಂದ ತೆಗೆಸಲು ಸಿವಿಲ್ ದಾವೆ ಹಾಕಿರುವುದಾಗಿ ಸಹ ಹೇಳಿರುತ್ತಾರೆ.

15. ಮುಂದುವರೆದು, ತಮ್ಮ ಪ್ರತ್ಯುತ್ತರದಲ್ಲಿ ತಾವು ಡಿ.ಸಿ.ಪಿ. ರವರಿಗೆ ನೀಡಿದ ದಿನಾಂಕ: 30-04-2021 ರ ದೂರಿನ ಅಂಶಗಳು ಹಾಗೂ ದಿನಾಂಕ:28-04-2021 ರಂದು ಪಿ.ಐ. ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯವರಿಗೆ ಸಂಭೋದಿಸಿ ಕೊಟ್ಟಿದ್ದ ದೂರಿನ ಅಂಶಗಳು ಹಾಗೂ ದೂರುಗಳು ಒಂದೇ ಆಗಿರುತ್ತವೆ ಎಂದು ಹೇಳಿರುತ್ತಾರೆ. ದಿನಾಂಕ:28-04-2021 ರಂದು ತಾವು ಕೊಟ್ಟ ದೂರನ್ನು ಬದಲಾಯಿಸಿ ಕೊಡುವಂತೆ ಶ್ರೀ ಓಂಕಾರಯ್ಯ ರವರ ಮುಖಾಂತರ ಎದುರುದಾರರು ಸೂಚಿಸಿದಾಗ ತಾವು ಬದಲಾಯಿಸಿ ಕೊಟ್ಟ ದೂರನ್ನು ಶ್ರೀ ಕಾಂತರಾಜು ರವರು ದಿನಾಂಕ;28-04-2021 ರಂದು ಪಡೆದಿರುವುದಾಗಿ ಷರಾ ಬರೆದು ತಿಳಿಸಿರುತ್ತಾರೆ ಹಾಗೂ ದಿನಾಂಕ: 29-04-2021 ರಂದು ತಾವು ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆಗೆ ಹೋಗಿಲ್ಲವೆಂದು ಹೇಳಿರುತ್ತಾರೆ.

16. ದೂರುದಾರರ ದೂರಿನ ಅಂಶಗಳನ್ನು ಮತ್ತು ಎದುರುದಾರರ ಆಕ್ಷೇಪಣೆ ಮತ್ತು ದೂರುದಾರರ ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರು ಮತ್ತು ಎದುರುದಾರರು ತಮ್ಮ ತಮ್ಮ ಪ್ರತಿಪಾದನೆಗಳನ್ನು ಸಮರ್ಥಿಸಿಕೊಳ್ಳುವಂತಹ ವಿವರಣೆ ನೀಡಿರುವುದು ಕಂಡುಬರುತ್ತದೆ. ಆದರೆ, ಈ ಪ್ರಾಧಿಕಾರದ ಮುಂದೆ ಪ್ರಸ್ತುತ

ಪ್ರಕರಣಕ್ಕೆ ಸಂಬಂಧಪಟ್ಟಂತೆ ಗಣನೆಗೆ ಬರುವ ಅಂಶವೇನೆಂದರೆ, ದೂರುದಾರರು ದೂರನ್ನು ಪೊಲೀಸ್ ಅಧಿಕಾರಿಯವರಾದ ಎದುರುದಾರರಿಗೆ ನೀಡಿದ ನಂತರ ಎದುರುದಾರರು ಕಾನೂನಾತ್ಮಕವಾಗಿ ವ್ಯವಹರಣೆಯನ್ನು ಮುಂದುವರೆಸಿ ಕ್ರಮ ಕೈಗೊಂಡಿದ್ದಾರೆಯೇ ಅಥವಾ ತಮ್ಮ ಕರ್ತವ್ಯದಲ್ಲಿ ಲೋಪ ಮತ್ತು ದುರ್ನಡತೆ ಎಸಗಿರುತ್ತಾರೆಯೇ ಎಂಬುದನ್ನು ನಿರ್ಧರಿಸುವುದು ಆಗಿರುತ್ತದೆಯೇ ಹೊರತು ದೂರುದಾರರ ಮತ್ತು ಎದುರುದಾರರ ಪ್ರತಿಪಾದನೆಗಳು ಸತ್ಯವೋ ಅಥವಾ ಅಸತ್ಯವೋ ಎನ್ನುವ ಬಗ್ಗೆ ನಿರ್ಧಾರ ಮಾಡಲು ಆಗುವುದಿಲ್ಲ. ಕಾರಣ ದೂರಿಗೆ ಸಂಬಂಧಪಟ್ಟ ಅಂಶಗಳ ಸತ್ಯ ಮತ್ತು ಅಸತ್ಯತೆಯ ಬಗ್ಗೆ ತನಿಖೆ ನಡೆಸಿ ಸಂಬಂಧಪಟ್ಟ ತನಿಖಾಧಿಕಾರಿಯು ಯುಕ್ತ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸುವುದು ತನಿಖಾಧಿಕಾರಿ/ಪೊಲೀಸ್ ಅಧಿಕಾರಿಯ ಕರ್ತವ್ಯ ಆಗಿರುತ್ತದೆ.

17. ಈ ಹಿನ್ನಲೆಯಲ್ಲಿ ಮೇಲೆ ಈಗಾಗಲೇ ವಿವರಿಸಿರುವಂತೆ ದೂರುದಾರರು ಎದುರುದಾರರಿಗೆ ತಮ್ಮ ದೂರನ್ನು ಸಲ್ಲಿಸಿದ ನಂತರ ಎದುರುದಾರರು ಕಾನೂನಾತ್ಮಕವಾಗಿ ಪ್ರಕರಣದ ತನಿಖೆಯನ್ನು ಮುಂದುವರೆಸಿದ್ದಾರೆಯೇ ಅಥವಾ ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿದ್ದಾರೆಯೇ ಎಂಬುದನ್ನು ನಿರ್ಧರಿಸುವ ಅಂಶ ಮಾತ್ರ ಈ ಪ್ರಾಧಿಕಾರದ ಮುಂದೆ ಇರುವುದರಿಂದ ಅದನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗಿದಿಯೇ ಹೊರತು ದೂರಿನ ಅಂಶಗಳ ಸತ್ಯ ಮತ್ತು ಅಸತ್ಯತೆಯ ಬಗ್ಗೆ ಪರಿಗಣಿಸುವ ಅವಶ್ಯಕತೆ ಈಗ ಇರುವುದಿಲ್ಲ.

18. ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎದುರುದಾರರ ದಿನಾಂಕ:12–07–2021 ರ ದಿನಾಂಕವುಳ್ಳ ಆಕ್ಷೇಪಣೆಯ ಪುಟ ಸಂಖ್ಯೆ–3 ರ ಕಂಡಿಕೆ–3 ಅನ್ನು ಪರಿಶೀಲಿಸಿದಾಗ, ದಿನಾಂಕ: 28–04–2021 ರಂದು ಶ್ರೀಮತಿ ವೀಣಾ ರವರು ನೀಡಿದ ದೂರಿಗೆ ಸಂಬಂಧಪಟ್ಟಂತೆ ದಿನಾಂಕ:29–04–2021 ರಂದು ಶ್ರೀಮತಿ ವೀಣಾರವರು ಶ್ರೀಓಂಕಾರಯ್ಯ ರವರೊಂದಿಗೆ ಮತ್ತೆ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಗೆ ಹಾಜರಾದಾಗ ದೂರುದಾರರ ದೂರಿನ ಅಂಶಗಳು ದೂರುದಾರರ ವ್ಯಕ್ತಿಗತ

ತೇಜೋವಧೆ ಮಾಡಿರುವ ಆಪಾದನೆಗಳಾಗಿ ಕಂಡುಬಂದಿರುವುದರಿಂದ ಹಾಗೂ ಆ ಕೃತ್ಯವು ಮಾನಹಾನಿ ಅಪರಾಧ ಆಗಿರುವುದರಿಂದ ಈ ಕುರಿತಂತೆ ನೇರವಾಗಿ ಮಾನ್ಯ ನ್ಯಾಯಾಲಯಕ್ಕೆ ಹೋಗಿ ಖಾಸಗಿ ದೂರನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಕಲಂ 199 ಸಿ.ಆರ್.ಪಿ.ಸಿ. ರಡಿಯಲ್ಲಿ ಅವಕಾಶ ಇದುದ್ದರಿಂದ ಪೊಲೀಸರಿಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡುವ ಅಧಿಕಾರ ಇರುವುದಿಲ್ಲವೆಂದು ದೂರನ್ನು ವಿಲೇ ಮಾಡಿ ಹಿಂಬಹರವನ್ನು ಶ್ರೀಮತಿ ವೀಣಾ ರವರಿಗೆ ನೀಡಿರುವುದಾಗಿ ಹಾಗೂ ಶ್ರೀಮತಿ ವೀಣಾ ರವರು ಹಿಂಬರಹವನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆಂದು ಹೇಳಿರುತ್ತಾರೆ. ಆದರೆ, ಹಿಂಬಹರವನ್ನು ನಿರಾಕರಿಸಿದ ಅಂಶವನ್ನು ದೂರುದಾರರು ಅಲ್ಲಗಳೆದಿರುತ್ತಾರೆ.

19. ಆದರೆ, ತಮ್ಮ ಅದೇ ದಿನಾಂಕ:12-07-2021 ರ ಆಕ್ಷೇಪಣೆಯ ಪುಟ ಸಂಖ್ಯೆ-1 ರ ಕಂಡಿಕೆ-1 ರಿಂದ ಪುಟ ಸಂಖ್ಯೆ-3 ರ 2ನೇ ಕಂಡಿಕೆಯವರೆಗೆ ದೂರುದಾರರು ದಿನಾಂಕ: 28-04-2021 ರಂದು ನೀಡಿರುವ ದೂರಿನ ಸಾರಾಂಶವೆಂದು ಎದುರುದಾರರು ಹೇಳಿಕೊಂಡಿರುತ್ತಾರೆ. ಮೇಲೆ ಉಲ್ಲೇಖಿಸಿದ ಆಕ್ಷೇಪಣೆಯ ಕಂಡಿಕೆಗಳಲ್ಲಿನ ಅಂಶಗಳನ್ನು ಅವಲೋಕಿಸಿದಾಗ, 2012ನೇ ಇಸವಿಯಲ್ಲಿ ನಡೆದ ಘಟನೆಗಳ ಬಗ್ಗೆ 9 ವರ್ಷಗಳ ನಂತರ ದಿನಾಂಕ:03-04-2012 ರಲ್ಲಿ ನಡೆದ ಘಟನೆಗೆ ಸಂಬಂಧಿಸಿದ ದೃಶ್ಯಗಳನ್ನು ದಿನಾಂಕ:28-09-2020 ರಂದು ಆರೋಪಿಗಳು ಸಾಮಾಜಿಕ ಜಾಲತಾಣವಾದ ಯೂಟ್ಯೂಬ್ ಮತ್ತು ಫೇಸ್ ಬುಕ್ ನಲ್ಲಿ ದೃಶ್ಯಗಳನ್ನು ಟಿ.ವಿ. ಪರದೆಯ ಅರ್ಧಭಾಗದಲ್ಲಿ ತೋರಿಸುತ್ತಾ ಈ ವೀಡಿಯೋದ ಧ್ವನಿಯನ್ನು ಮ್ಯೂಟ್ ಮಾಡಿ ಚರ್ಚೆಯನ್ನು ಮಾಡುತ್ತಾ ಅರ್ಜಿದಾರರಾದ ಶ್ರೀಮತಿ ವೀಣಾ ರವರ ವಿರುದ್ಧ ಆಪಾದನೆ ಮಾಡಿ ದೂರುದಾರರನ್ನು ಅವಮಾನ ಮಾಡುವ ಉದ್ದೇಶದಿಂದ ದೂರುದಾರರ ಬಗ್ಗೆ ಅತ್ಯಂತ ಕೆಟ್ಟ ಅವಾಚ್ಯ ಶಬ್ದಗಳಿಂದ ಮಾತನಾಡಿ ತೇಜೋವಧೆ ಮಾಡಿರುತ್ತಾರೆ ಎಂದೆನ್ನುವ ದೂರಿನ ಅಂಶವನ್ನು ಸಾರಾಂಶದ ರೂಪದಲ್ಲಿ ಹೇಳಿರುತ್ತಾರೆ. ಮುಂದುವರೆದು, ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಕ್ಕೆ ಸಂಬಂಧಿಸಿದ ಘಟನೆಗಳ ದೃಶ್ಯವಳಿಗಳನ್ನು ಒಳಸಂಚು ರೂಪಿಸಿ ಆರೋಪಿಗಳಿಗೆ ಅನುಕೂಲವಾಗುವಂತೆ ಸಂಭಾಷಣೆ ಮಾಡಿ ದೂರುದಾರರಿಗೆ ಅವಮಾನ ಮಾಡುವ

ಉದ್ದೇಶದಿಂದ ಕೆಟ್ಟ ಶಬ್ದಗಳನ್ನು ಬಳಸಿ ಸಮಾಜದ ಮುಂದೆ ಅರ್ಜಿದಾರರ ಬಗ್ಗೆ ಅತ್ಯಂತ ಕೆಟ್ಟ ಅವಾಚ್ಯ ಶಬ್ದಗಳ ಮೂಲಕ ಸಮಾಜದ ಮುಂದೆ ಅತ್ಯಂತ ಕೀಳಾಗಿ ಅಸಭ್ಯವಾಗಿ ಕೆಟ್ಟ ಮನೋದೃಷ್ಠಿಯಿಂದ ನೋಡುವಂತೆ ದೂರುದಾರರಿಗೆ ಅಪರಾಧಿ ಮನೋಭಾವದಿಂದಲೇ ಬೆದರಿಕೆ ಹಾಕಲು ಹಾಗೂ ತಮ್ಮ ಹತೋಟಿಯಲ್ಲಿರುವ ಮಾದ್ಯಮ ಹಾಗೂ ಸಾಮಾಜಿಕ ಜಾಲತಾಣದ ಮೂಲಕ ಸುಳ್ಳು ಆರೋಪಗಳನ್ನು ಮಾಡಿ ಮಹಿಳೆಯ ಮಾನಭಂಗ ಮಾಡಲು ದೃಶ್ಯ ಮಾದ್ಯಮವನ್ನು ಬಳಸಿಕೊಂಡಿರುತ್ತಾರೆ ಹಾಗೂ ಅರ್ಜಿದಾರರಾದ ಮಹಿಳೆಯನ್ನು ರೌಡಿ ಎಂದು, ವಿಚ್ಛೇದಿತೆ ಎಂದು ಚಾರಿತ್ರ್ಯ ಇಲ್ಲದವಳೆಂದು, ಮನೆ ಹಾಳು ಮಾಡುವಳೆಂಬ ಅವಾಚ್ಯ ಶಬ್ದಗಳನ್ನು ಉಪಯೋಗಿಸುವ ಮೂಲಕ ಹೆಣ್ಣಿನ ಚಾರಿತ್ರ್ಯವಧೆ ಮಾಡಿರುತ್ತಾರೆಂದು ದೂರುದಾರರ ದಿನಾಂಕ:28-04-2021 ರ ಸಾರಾಂಶವೆಂದು ಎದುರುದಾರರೇ ಹೇಳಿಕೊಂಡಿರುತ್ತಾರೆ.

20. ಮೇಲ್ಕಾಣಿಸಿದಂತೆ ಎದುರುದಾರರೇ ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ: 28-04-2021 ರಂದು ಶ್ರೀಮತಿ ವೀಣಾ ರವರು ನೀಡಿದ ದೂರಿನ ಅಂಶಗಳೆಂದು ಉಲ್ಲೇಖಿಸಿರುವ ಆಪಾದನೆಯ ಅಂಶಗಳನ್ನು ಪರಿಶೀಲಿಸಿದಾಗ, ಸದರಿ ಆಪಾದನೆಗಳು ಐ.ಪಿ.ಸಿ.ಯ ಅಧ್ಯಯ-21ರಡಿಯಲ್ಲಿನ ಮಾನಹಾನಿ (of defamation) ರ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧಗಳು ಮಾತ್ರ ಆಗಿರುತ್ತವೆ ಎನ್ನುವ ನಿರ್ಧಾರಕ್ಕೆ ಬರಲು ಮೇಲ್ನೋಟಕ್ಕೆ ಸಾಧ್ಯವಾಗುವುದಿಲ್ಲ. ಸದರಿ ದೂರಿನ ಅಂಶಗಳು ಐ.ಪಿ.ಸಿ. ಕಲಂ 509 ರಡಿಯಲ್ಲಿನ ಅಪರಾಧದ ವ್ಯಾಪ್ತಿಯಲ್ಲಿಯೂ ಬರುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

21. ಐ.ಪಿ.ಸಿ. ಕಲಂ 509 ರ ಅಪರಾಧದ ಪರಿಭಾಷೆ ಈ ಕೆಳಕಂಡಂತೆ ಇರುತ್ತದೆ.

> **"509. Word, gesture or act intended to insult the modesty of a woman** –Whoever, intending to insult the modesty of any woman, utters any word, makes any sound or gesture, or exhibits any object,

intending that such word or sound shall be heard, or that such gesture or object shall be seen, by such woman, or intrudes upon the privacy of such woman, [shall be punished with simple imprisonment for a term which may extend to three years, and also with fine.]'

ಮೇಲ್ಕಂಡ ಐ.ಪಿ.ಸಿ. ಕಲಂ 509 ರಡಿಯಲ್ಲಿನ ಅಪರಾಧವು ಸಂಜ್ಞೆಯ (cognizable) ಅಪರಾಧವಾಗಿರುತ್ತದೆ.

22. ಮೇಲಾಗಿ, ಎದುರುದಾರರೇ ದಿನಾಂಕ:28-04-2021 ರ ದಿನಾಂಕವುಳ್ಳ ದೂರುದಾರರ ದೂರಿನ ಸಾರಾಂಶವೆಂದು ತಮ್ಮ ಆಕ್ಷೇಪಣೆಯಲ್ಲಿ ಹೇಳಿಕೊಂಡಿರುವ ಮೇಲೆ ವಿವರಿಸಿರುವ ಆಪಾದನೆಯ ಅಂಶಗಳನ್ನು ಪರಿಶೀಲಿಸಿದಾಗ, ದಿನಾಂಕ: 28-04-2021 ರ ದೂರಿನಲ್ಲಿನ ಆರೋಪಗಳು "THE INDECENT REPRESENTATION OF WOMEN (PROHIBITION) ACT, 1986 (NO.60 OF 1986) ಕಾಯ್ದೆ ಅಡಿಯಲ್ಲಿಯೂ ಒಳಪಡುವಂತಹ ಆಪಾದನೆಗಳಾಗಿವೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಕಾರಣ ಸದರಿ ಕಾಯ್ದೆಯ ಕಲಂ 3 ಮತ್ತು 4 ರ ಅಂಶಗಳು ಈ ಕೆಳಕಂಡಂತೆ ಇರುತ್ತವೆ :-

Sec.3. Prohibition of advertisement containing indecent representation of Women: No person shall publish, or cause to be published, or arrange or take part in the publication or exhibition of, any advertisement which contains indecent representation of women in any form.

4. Prohibition of publication or sending by post of books, pamphlets, etc: containing indecent representation of women: No person shall produce or

cause to be produced, sell, let to hire, distribute, circulate or send by post any book, pamphlet, paper, slide, film, writing, drawing, painting, photograph, representation or figure which contains indecent representation of women in any form: provided that noting in this section shall apply to-

a. any book, pamphlet, paper, slide, film, writing, drawing, photograph, representation or figure–

i. the publication of which is proved to be justified as being for the public good on the ground that such book, pamphlet, paper, slide, film, writing, drawing, painting, photography, art, or learning or other objects of general concern; or

ii. which is kept or used bona fide for religious purpose;

any representation sculptured, engraved, painted or otherwise represented on or in–

i. any ancient monument within the meaning of the Ancient Monument and Archaeological Sites and Remains Act, 1958 (24 of 1958) ; or

ii. any temple, or on any car used or the conveyance of idols, or kept or used for any religious purpose;

any film in respect of which the provisions of Part-II of the Cinematograph Act, 1952 (37 of 1952), will be applicable.'

23. THE INDECENT REPRESENTATION OF WOMEN (PROHIBITION) ACT, 1986 (NO.60 OF 1986) ರ ಕಾಯ್ದೆಯ ಕಲಂ 8 (2) ರ ಪ್ರಕಾರ ಸದರಿ ಕಾಯ್ದೆಯಡಿಯಲ್ಲಿ ಶಿಕ್ಷಿಸಲ್ಪಡುವ ಎಲ್ಲಾ ಅಪರಾಧಗಳು ಸಂಜ್ಞೆಯ (cognizable ) ಅಪರಾಧಗಳಾಗಿರುತ್ತವೆ. ಈ ಹಿನ್ನಲೆಯಲ್ಲಿ ಎದುರುದಾರರೇ ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ:28-04-2021 ರ ದೂರುದಾರರ ದೂರಿನ ಆಪಾದನೆಯ ಸಾರಾಂಶವೆಂದು ಉಲ್ಲೇಖಿಸಿರುವ ಅಂಶಗಳನ್ನು ಮತ್ತು ಎದುರುದಾರರೇ ತಮ್ಮ ಆಕ್ಷೇಪಣೆಯೊಂದಿಗೆ ಹಾಜರುಪಡಿಸಿದ ದಿನಾಂಕ:28-04-2021 ರ ದೂರುದಾರರ ದೂರಿನ ಪ್ರತಿಯಲ್ಲಿನ ಆಪಾದನೆಯ ಅಂಶಗಳನ್ನು ಪರಿಶೀಲಿಸಿದಾಗ, ದೂರುದಾರರ ದೂರಿನ ಆಪಾದನೆಗಳೆಲ್ಲಾ ಕೇವಲ ಐ.ಪಿ.ಸಿ.ಯ ಅಧ್ಯಯ-21 ರಡಿಯಲ್ಲಿ ಬರುವಂತಹ ಮಾನಹಾನಿಯ ಆಪಾದನೆಗಳಿಗೆ ಸಂಬಂಧಪಟ್ಟ ಅಪರಾಧಗಳು ಮಾತ್ರ ಆಗಿರದೇ ಐ.ಪಿ.ಸಿ.ಯ ಕಲಂ 509 ಹಾಗೂ "THE INDECENT REPRESENTATION OF WOMEN (PROHIBITION) ACT, 1986 (NO.60 OF 1986) ರ ಕಾಯ್ದೆಯ ವ್ಯಾಪ್ತಿಯಲ್ಲಿಯೂ ಬರುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

24. ಈ ಕಾರಣದಿಂದ ಸದರಿ ದಿನಾಂಕ:28-04-2021 ರ ದೂರುದಾರರ ದೂರಿನ ಅಂಶಗಳಿಗೆ ಸಂಬಂಧಪಟ್ಟಂತೆ ಸಿ.ಆರ್.ಪಿ.ಸಿ. ಕಲಂ 199 ರಡಿಯಲ್ಲಿ ಪರಿಹಾರ ಕಂಡುಕೊಳ್ಳಲು ಖಾಸಗಿ ದೂರನ್ನು ದಾಖಲಿಸುವುದಕ್ಕೆ ಮಾನ್ಯ ನ್ಯಾಯಾಲಯಕ್ಕೆ ಹೋಗಲು ಸೂಚಿಸಿ ನೀಡಿರುವ ಹಿಂಬರಹ ನ್ಯಾಯ ಸಮ್ಮತವಾಗಿರುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಇದರಿಂದ ಎದುರುದಾರರು ತಮ್ಮ ಕರ್ತವ್ಯದಲ್ಲಿ ಕರ್ತವ್ಯಲೋಪ ಹಾಗೂ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

25. ಇನ್ನೂಳಿದಂತೆ ದಿನಾಂಕ:30-04-2021 ರಂದು ದೂರುದಾರರು ತಮ್ಮ ದಿನಾಂಕ: 28-04-2021 ರ ದೂರನ್ನೇ ಎದುರುದಾರರ ಮೇಲಾಧಿಕಾರಿಯಾದ ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ ರವರಿಗೆ ನೀಡಿರುವುದಾಗಿ ಹೇಳಿಕೊಂಡಿರುತ್ತಾರೆ. ದೂರುದಾರರ ಪ್ರಕಾರ ದಿನಾಂಕ:28-04-2021ರ ತಮ್ಮ ದೂರಿನ ಮೇಲೆ ಯಾವುದೇ ಕ್ರಮ ಎದುರುದಾರರು ಜರುಗಿಸದೇ ಇರುವುದರಿಂದ ದಿನಾಂಕ:30-04-2021 ರಂದು ಎದುರುದಾರರ ಹಿರಿಯ ಅಧಿಕಾರಿಯವರಿಗೆ ಅದೇ ದೂರನ್ನು ನೀಡಿರುವುದಾಗಿ ಹೇಳಿಕೊಂಡಿರುತ್ತಾರೆ.

26. ಈ ಬಗ್ಗೆ ಎದುರುದಾರರು ಸಹ ದಿನಾಂಕ:30-04-2021 ರಂದು ದೂರುದಾರರು ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ ರವರಿಗೆ ನೀಡಿದ ದೂರನ್ನು ದಿನಾಂಕ:30-04-2021 ರಂದು ಸದರಿ ಕಛೇರಿಯಿಂದ ಪಡೆದು ಪರಿಶೀಲನೆ ಮಾಡಿ ಕಾನೂನು ರೀತಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಶ್ರೀಮತಿ ವೀಣಾರವರಿಗೆ ಹಿಂಬರಹವನ್ನು ನೀಡಿರುವುದಾಗಿ ಹೇಳಿಕೊಂಡು, ಸದರಿ ಹಿಂಬರಹದ ಪ್ರತಿಯನ್ನು ತಮ್ಮ ಆಕ್ಷೇಪಣೆಯೊಂದಿಗೆ ಹಾಜರುಪಡಿಸಿರುತ್ತಾರೆ. ಇದರಿಂದ, ದಿನಾಂಕ:30-04-2021 ರಂದು ದೂರುದಾರರು ಮಾನ್ಯ ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ ರವರಿಗೆ ನೀಡಿದ ದೂರನ್ನು ಅದೇ ದಿವಸ ಎದುರುದಾರರು ಸ್ವೀಕರಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

27. ಈ ಬಗ್ಗೆ ಪ್ರಾಥಮಿಕ ವರದಿಯನ್ನು ತನಿಖಾಧಿಕಾರಿಯವರಿಗೆ ಸಲ್ಲಿಸಿರುವುದಾಗಿ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುತ್ತಾರೆ ಹಾಗೂ ದಿನಾಂಕ:30-04-2021 ರ ದೂರುದಾರರ ದೂರಿನ ವಿಚಾರಗಳನ್ನು ಶ್ರೀಮತಿ ಲಲಿತಾ ಕುಮಾರಿ v/s ಉತ್ತರ ಪ್ರದೇಶ ಪ್ರಕರಣ (ಡಬ್ಲ್ಯೂಪಿ 68/2008) ರನ್ವಯ ಪ್ರಾಥಮಿಕ ವಿಚಾರಣೆ ಕೈಗೊಂಡಿರುತ್ತದೆ ಎಂದು ಕೋವಿಡ್-19 ಲಾಕ್‌ಡೌನ್ ಇದ್ದ ಕಾರಣ ವಿಚಾರಣೆ ಮಾಡಿ ವರದಿ ಸಲ್ಲಿಸಲು ತಡವಾಗಿರುತ್ತದೆಂದು ಹೇಳಿರುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ದಿನಾಂಕ:30-04-2021 ರಂದು ದೂರುದಾರರು

ಉಪ ಪೊಲೀಸ್ ಆಯುಕ್ತರವರಿಗೆ ನೀಡಿದ ದೂರನ್ನು ಅದೇ ದಿವಸ ಸ್ವೀಕರಿಸಿದ ತಕ್ಷಣ ಪ್ರಥಮ ವರ್ತಮಾನ ವರದಿಯನ್ನು ಎದುರುದಾರರು ದಾಖಲಿಸಿರುವುದಿಲ್ಲ.

28. ಎದುರುದಾರರು ಹಾಜರುಪಡಿಸಿರುವ ದಿನಾಂಕ:05-07-2021 ರ ದಿನಾಂಕದ ದೂರುದಾರರಾದ ಶ್ರೀಮತಿ ವೀಣಾ ರವರಿಗೆ ನೀಡಿದ ಹಿಂಬರಹವನ್ನು ಅವಲೋಕಿಸಿದಾಗ, ದೂರುದಾರರು ಡಿ.ಸಿ.ಪಿ. ರವರ ಕಛೇರಿಯಲ್ಲಿ ಸಲ್ಲಿಸಿಕೊಂಡ ದಿನಾಂಕ:30-04-2021 ರ ದೂರಿನ ಅಂಶಗಳು ದೂರುದಾರರು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿಕೊಂಡ ಪಿ.ಸಿ.ಆರ್. ದೂರಿನಲ್ಲಿಯೂ ಇರುವುದರಿಂದ ದೂರುದಾರರ ದೂರು ಅರ್ಜಿಯನ್ನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ನೋಂದಣಿಗೊಂಡ ಮೊಕದ್ದಮೆ ಸಂಖ್ಯೆ:99/2021 ರ ಕೇಸಿನ ತನಿಖೆಯಲ್ಲಿ ಅಳವಡಿಸಿಕೊಂಡಿರುವುದಾಗಿ ಹೇಳಿರುವುದು ಕಂಡುಬರುತ್ತದೆ.

29. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ದೂರುದಾರರು ಬೆಂಗಳೂರು ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಸಲ್ಲಿಸಿರುವ ಪಿ.ಸಿ.ಆರ್. ಸಂಖ್ಯೆ: 9378/2021 ರ ಪ್ರಕರಣವನ್ನು ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ:03-06-2021 ರಂದು ಸಲ್ಲಿಸಿರುವುದು ಕಂಡುಬರುತ್ತದೆ. ಎದುರುದಾರರೇ ಹಾಜರುಪಡಿಸಿರುವ ಅಪರಾಧ ಸಂಖ್ಯೆ:99/2021 ರ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ಪರಿಶೀಲಿಸಿದಾಗ, ಮಾನ್ಯ ನ್ಯಾಯಾಲಯದ ಆದೇಶದಂತೆ, ದಿನಾಂಕ: 16-06-2021 ರಂದು ಪ್ರಥಮ ವರ್ತಮಾನ ವರದಿಯನ್ನು ಆರೋಪಿಗಳ ವಿರುದ್ಧ ಐ.ಪಿ.ಸಿ. ಕಲಂ 120(ಬಿ), 448, 506, 499, 500, 509, 34 ರಡಿಯಲ್ಲಿ ಹಾಗೂ "THE INDECENT REPRESENTATION OF WOMEN (PROHIBITION) ACT, 1986 (NO.60 OF 1986) ರ ಕಲಂ 4 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧಕ್ಕಾಗಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವುದು ಕಂಡುಬರುತ್ತದೆ.

30. ಎದುರುದಾರರ ಆಕ್ಷೇಪಣೆಯ ಪ್ರಕಾರವೇ ದಿನಾಂಕ:30-04-2021 ರಂದು ದೂರುದಾರರು ಉಪ ಪೊಲೀಸ್ ಆಯುಕ್ತರವರಿಗೆ ನೀಡಿರುವ ದೂರಿನ ಅಂಶಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸಿರುವ ಪಿ.ಸಿ.ಆರ್. ಪ್ರಕರಣ ದಾಖಲಿಸಿರುವುದು ಇರುತ್ತದೆ ಹಾಗೂ ದೂರುದಾರರ ದಿನಾಂಕ:30-04-2021 ರ ದೂರಿನ ಅಂಶಗಳು ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸಿದ ದೂರಿನ ಅಂಶಗಳಲ್ಲಿ ಒಳಗೊಂಡಿರುತ್ತದೆ. ಆದಾಗ್ಯೂ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ದಿನಾಂಕ:16-06-2021 ರಂದು ಎದುರುದಾರರು ದಾಖಲಿಸಿರುವುದು ಕಂಡುಬರುತ್ತದೆಯೇ ಹೊರತು ಅಲ್ಲಿಯವರೆಗೆ ದಿನಾಂಕ: 30-04-2021 ರಂದು ದೂರುದಾರರು ಪೊಲೀಸ್ ಉಪ ಆಯುಕ್ತರವರಿಗೆ ನೀಡಿದ ದೂರಿಗೆ ಸಂಬಂಧಪಟ್ಟಂತೆ ಯಾವುದೇ ಪ್ರಥಮ ವರ್ತಮಾನ ವರದಿ ದಾಖಲಿಸದೇ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದ ಎದುರುದಾರರ ಕರ್ತವ್ಯಲೋಪ ಹಾಗೂ ದುರ್ನಡತೆ ಎಸಗಿರುವುದು ಕಂಡುಬರುತ್ತದೆ.

31. ದಿನಾಂಕ:30-04-2021 ರಂದು ದೂರುದಾರರು ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗದವರಿಗೆ ನೀಡಿದ ದೂರಿಗೆ ಸಂಬಂಧಪಟ್ಟಂತೆ ಪ್ರಾಥಮಿಕ ತನಿಖೆ ಕೈಗೊಂಡಿರುತ್ತದೆ ಹಾಗೂ ಕೋವಿಡ್-19 ರ ಲಾಕ್‌ಡೌನ್‌ಯಿಂದಾಗಿ ತನಿಖೆ ಪೂರೈಸಿ ವರದಿ ಸಲ್ಲಿಸಲು ತಡವಾಗಿರುತ್ತದೆ ಎಂಬುದು ಎದುರುದಾರರ ಒಂದು ಪ್ರತಿಪಾದನೆಯ ಅಂಶವಾಗಿರುತ್ತದೆ. ಈ ಹಿನ್ನಲೆಯಲ್ಲಿ, ಪ್ರಾಥಮಿಕ ತನಿಖೆಯ ಬಗ್ಗೆ ಎದುರುದಾರರು ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ಶ್ರೀಮತಿ ಲಲಿತಾ ಕುಮಾರಿ v/s ಉತ್ತರ ಪ್ರದೇಶ ಪ್ರಕರಣ (ಡಬ್ಲ್ಯೂಪಿ 68/2008)ರ ಪ್ರಕರಣವನ್ನು ಉಲ್ಲೇಖಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಅಂಶಗಳ ಬಗ್ಗೆ ಉಲ್ಲೇಖಿಸುವುದು ಅವಶ್ಯಕವಾಗಿರುತ್ತದೆ. ಗೌರವಾನ್ವಿತ ಭಾರತದ ಸರ್ವೋಚ್ಛ ನ್ಯಾಯಾಲಯವು **AIR 2014 (SC) page 187/ (2014) 2 SCC 1** Lalitha Kumari V/s Government of

Uttar Pradesh and others ರ ಪ್ರಕರಣದ ಕಂಡಿಕೆ-119 ಮತ್ತು 120 ರಲ್ಲಿ ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ.

> **119. Therefore, in view of various counterclaims regarding registration or non-registration, what is necessary is only that the information given to the police must disclose the commission of a cognizable offence. In such a situation, registration of an FIR is mandatory. However, if no cognizable offence is made out in the information given, then the FIR need not be registered immediately and perhaps the police can conduct a sort of preliminary verification or inquiry for the limited purpose of ascertaining as to whether a cognizable offence has been committed. But, if the information given clearly mentions the commission of a cognizable offence., there is no other option but to register an FIR forthwith. Other considerations are not relevant at the stage of registration of FIR, such as, whether the information is falsely given, whether the information is genuine, whether the information is credible, etc. These are the issues that have to be verified during the investigation of the FIR. At the stage of registration of FIR, what is to be seen is merely whether the information given ex facie discloses the commission of a cognizable offence. If, after investigation, the information given is found to**

**be false, there is always an option to prosecute the complainant for filing a false FIR.**

***Conclusion/Directions***

**120. In view of the aforesaid discussion, we hold ;**

**120.1. The registration of FIR is mandatory under Section 154 of the Code, if the information discloses commission of a cognizable offence and no preliminary inquiry is permissible in such a situation.**

**120.2. If the information received does not disclose a cognizable offence but indicates the necessary for an inquiry, a preliminary inquiry may be conducted only to ascertain whether cognizable offence is disclosed or not.**

**120.3. If the inquiry discloses the commission of a cognizable offence, the FIR must be registered. In cases where preliminary inquiry ends in closing the complaint, a copy of the entry of such closure must be supplied to the first informant forthwith and not later than one week. It must disclose reasons in brief for closing the complaint and not proceeding further.**

**120.4. The police officer cannot avoid his duty of registering offence if cognizable offence is disclosed. Action must be taken against erring**

officers who do not register the FIR if information received by him discloses a cognizable offence.

120.5. The scope of preliminary inquiry is not to verify the veracity or otherwise of the information received but only to ascertain whether the information reveals any cognizable offence.

120.6. As to what type and in which cases preliminary inquiry is to be conducted will depend on the facts and circumstances of each case. The category of cases in which preliminary inquiry may be made are as under :

(a ) Matrimonial disputes/family disputes
(b) Commercial offences
(c ) Medical negligence cases
(d) Corruption cases
(e) Cases where there is abnormal delay/laches in initiating criminal prosecution, for example, over 3 months' delay in reporting the matter without satisfactorily explaining the reasons for delay.

The aforesaid are only illustrations and not exhaustive of all conditions which may warrant preliminary inquiry.

120.7. While ensuring and protecting the rights of the accused and the complainant, a

**preliminary inquiry should be made time-bound and in any case it should not exceed 7 days. The fact of such delay and the causes of it must be reflected in the General Diary entry.**

**120.8. Since the General Diary/Station Diary/Daily Diary is the record of all information received in a police station, we direct that all information relating to cognizable offences, whether resulting in registration of FIR or leading to an inquiry, ,must be mandatorily and meticulously reflected in the said diary and the decision to conduct a preliminary inquiry must also be reflected, as mentioned above."**

ಮೇಲ್ಕಂಡ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ, ಒಂದೊಮ್ಮೆ ವಿಚಾರಣೆಯಲ್ಲಿ ಸಂಜ್ಞೆಯ ಅಪರಾಧಗಳು ಕಂಡುಬಂದಲ್ಲಿ ಪ್ರಥಮ ವರ್ತಮಾನ ವರದಿಯನ್ನು ನೋಂದಣಿ ಮಾಡಬೇಕಾಗಿರುತ್ತದೆ. ಪ್ರಥಾಮಿಕ ತನಿಖೆಯು ಕೇವಲ ಸಂಜ್ಞೆಯ ಅಪರಾದ ಕಂಡುಬರುತ್ತದಯೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಮಾತ್ರ ಮಾಡಬಹುದಾಗಿದೆ.

32. ದೂರುದಾರರು ಮತ್ತು ಎದುರುದಾರರು ಇಬ್ಬರೂ ದಿನಾಂಕ:30-04-2021 ರಂದು ಪೋಲೀಸ್ ಉಪ ಆಯುಕ್ತರವರಿಗೆ ನೀಡಿರುವ ದೂರು ಎಂದು ಹೇಳಿಕೊಂಡು ಹಾಜರುಪಡಿಸಿರುವ ದೂರಿನ ಅಂಶಗಳನ್ನು ಅವಲೋಕಿಸಿದಾಗ, ಮೇಲ್ನೋಟಕ್ಕೆ ಸಂಜ್ಞೆಯ ಅಪರಾಧಗಳು ಸಹ ಆಪಾದನೆಯ ಅಂಶಗಳಲ್ಲಿ ಒಳಗೊಂಡಿರುವುದು ಕಂಡುಬರುತ್ತದೆ. ಮೇಲಾಗಿ, ದಿನಾಂಕ:30-04-2021 ರಂದು ದೂರುದಾರರು ಉಪ ಪೋಲೀಸ್ ಆಯುಕ್ತರವರಿಗೆ ನೀಡಿದ ದೂರನ್ನು ಸ್ವೀಕರಿಸಿದ ನಂತರ ಎದುರುದಾರರು ಸದರಿ ದೂರಿನ ಬಗ್ಗೆ ಪ್ರಾಥಮಿಕ ತನಿಖೆ ಮಾಡಿರುವ ಬಗ್ಗೆ ವರದಿಯನ್ನು

ಮೇಲಾಧಿಕಾರಿಯವರಿಗೆ ನೀಡಿರುವುದನ್ನು ಹೊರತುಪಡಿಸಿದರೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಫ್.ಐ.ಆರ್. ದಿನಾಂಕ:16-06-2021 ರವರೆವಿಗೂ ದಾಖಲಿಸದೇ ಇರುವುದು ಅಂದರೆ, ಮಾನ್ಯ ನ್ಯಾಯಾಲಯದ ಆದೇಶ ಆಗುವವರೆವಿಗೂ ದಾಖಲಿಸದೇ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

33. ಮೇಲೆ ವಿವರಿಸಿದ ಕಾರಣಗಳಿಗಾಗಿ ದಿನಾಂಕ:28-04-2021 ರ ಮತ್ತು ದಿನಾಂಕ: 30-04-2021 ರ ಎರಡೂ ದೂರಿನ ಅಂಶಗಳನ್ನು ಪರಿಶೀಲಿಸಿದಾಗ, ಅವುಗಳಲ್ಲಿ ಸಂಜ್ಞೆಯ (cognizable) ಅಪರಾಧದ ಆಪಾದನೆಗಳು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಕಾರಣದಿಂದ ದೂರುದಾರರ ದೂರಿನ ಮೇಲೆ ಸೂಕ್ತವಾದ ಕಾನೂನು ಕ್ರಮ ಜರುಗಿಸದೇ ಎದುರುದಾರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಹಾಗೂ ಎದುರುದಾರರ ನಡೆಯು ದುರ್ನಡತೆಯಿಂದ ಕೂಡಿರುವುದು ಸಹ ಮೇಲ್ನೋಟಕ್ಕೆ ಕಂಡುಬರುತ್ತದೆ.

34. ಈ ಎಲ್ಲಾ ಕಾರಣಗಳಿಗಾಗಿ, ದೂರುದಾರರು ಎದುರುದಾರರಿಗೆ ಲಿಖಿತ ರೂಪದಲ್ಲಿ ದೂರನ್ನು ಸಲ್ಲಿಸಿದರೂ ಸಹ ಯಾವುದೇ ಕ್ರಮವನ್ನು ಕೈಗೊಳ್ಳದೆ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿಸಿರುತ್ತಾರೆ.

35. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಎದುರುದಾರರು ನೀಡಿರುವ ಆಕ್ಷೇಪಣೆಗಳು, ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

36. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

37. ಅದಲ್ಲದೆ ಎದುರುದಾರರಾದ ಶ್ರೀ ಹೆಚ್. ಎಂ. ಕಾಂತರಾಜು, ಪೊಲೀಸ್ ಇನ್ಸ್‌ಪೆಕ್ಟರ್, ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆ, ಬೆಂಗಳೂರು ರವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

38. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಲಗತ್ತಿಸಿದೆ.

11/10/24

(ನ್ಯಾಯಾಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.